
# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಜ್ಯೇಷ್ಠ ಪ್ರಚಾರಕ ಸ್ವರ್ಗೀಯ ಶ್ರೀ ಹರಿಭಾವು ವಝೆ ಅವರ ಜೀವನಯಾತ್ರೆ ಕುರಿತಾದ 'ಚರಿತಾರ್ಥ' ಪುಸ್ತಕ ಲೋಕಾರ್ಪಣಾ ಕಾರ್ಯಕ್ರಮವು ನವೆಂಬರ್ 17, 2023ರಂದು ಶಂಕರಪುರಂನ ರಂಗರಾವ್ ರಸ್ತೆಯ ಉತ್ತುಂಗ ಸಭಾಂಗಣದಲ್ಲಿ ನಡೆಯಿತು. ಜ್ಯೇಷ್ಠ ಪ್ರಚಾರಕ ಸು. ರಾಮಣ್ಣ, ನಿಕಟಪೂರ್ವ ಪ್ರಾಂತ ಸಂಘಚಾಲಕ ವೆಂಕಟರಾಮು, ಕ್ಷೇತ್ರ ಪ್ರಚಾರಕ್ ಸುಧೀರ್, ಕ್ಷೇತ್ರೀಯ ಕಾರ್ಯವಾಹ ನಾ. ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.


ಸಂಪುಟ : 45 | ಸಂಚಿಕೆ : 15 | ಕಾರ್ತಿಕ-ಮಾರ್ಗಶಿರ | ಕಲಿಯುಗಾಬ್ದ 5125 | 01-12-2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ರಾಮಜನ್ಮಭೂಮಿಯಲ್ಲಿ ರಾಮಮಂದಿರ ನಿರ್ಮಾಣ: ಆಂದೋಲನದ ಮೈಲಿಗಲ್ಲುಗಳು

ಮರ್ಯಾದಾ ಪುರುಷೋತ್ತಮ ಎಂದೇ ಕರೆಯಲ್ಪಡುವ ಅಯೋಧ್ಯೆಯ ರಾಮನ ಜೀವನ ಇಡೀ ದೇಶದ ಸಾಂಸ್ಕೃತಿಕ ಅಸ್ಮಿತೆಯೆಂದರೆ ಅತಿಶಯೋಕ್ತಿಯಲ್ಲ. ಈ ಅಸ್ಮಿತೆಯನ್ನು ಉಳಿಸಿಕೊಳ್ಳಲು ನಡೆದ ಯುದ್ಧಗಳು, ಹೋರಾಟಗಳು, ಆಂದೋಲನಗಳು ಅಸಂಖ್ಯಾತ. ಅವೆಲ್ಲದರ ಪರಿಣಾಮವಾಗಿ ಇಂದು ಭವ್ಯವಾದ ರಾಮಮಂದಿರ ಹಿಂದುಗಳ ನಂಬಿಕೆಯಂತೆ ಆತನ ಜನ್ಮಸ್ಥಳವಾದ ಅಯೋಧ್ಯೆಯಲ್ಲೇ ನಿರ್ಮಾಣಗೊಂಡು ಲೋಕಾರ್ಪಣೆಯಾಗುವ ಪರ್ವಕಾಲದಲ್ಲಿ ನಾವಿದ್ದೇವೆ. ಸುಮಾರು ಐದು ಶತಮಾನಗಳ ನಿರಂತರ ಹೋರಾಟದ ಫಲವಾಗಿ ಇಂದು ಜಗತ್ತಿನ ಚಿತ್ತ ಭಾರತದ ರಾಷ್ಟ್ರಮಂದಿರದತ್ತ ನೆಡುವಂತೆ ಮಾಡಿರುವುದು ನಿಜ. ಆದರೆ ಈ ಸಾಹಸ ಕಾರ್ಯದ ಹಿಂದಿನ ಹಲವು ಮೈಲಿಗಲನ್ನು, ಬಲಿದಾನಗಳನ್ನು, ಹೋರಾಟಗಳನ್ನು ನೆನೆಯುವ ಕರ್ತವ್ಯ ನಮ್ಮೆಲ್ಲರದ್ದು. ಹಾಗಾಗಿ ರಾಮಮಂದಿರಕ್ಕಾಗಿ ನಡೆದ ಹೋರಾಟಗಳ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

**1528:** ಮೊಘಲ್ ದೊರೆ ಬಾಬರನ ಸೇನಾಪತಿ ಬಾಕಿರ್ ಖಾನ್ (ಮೀರ್ ಬಾಕಿ) ಮಸೀದಿಗಳ ನಿರ್ಮಾಣಕ್ಕೆ ಮುಂದಾಗುತ್ತಾನೆ. ಆತ ಅಯೋಧ್ಯೆಯ ರಾಮಜನ್ಮಭೂಮಿಯಲ್ಲಿ ಹಿಂದುಗಳು ತಮ್ಮ ಅತ್ಯಂತ ಪವಿತ್ರವೆಂದು ನಂಬಿದ್ದ ರಾಮಮಂದಿರವನ್ನು ಕೆಡವಿ ಮಸೀದಿಯನ್ನು ನಿರ್ಮಿಸುತ್ತಾನೆ. ಅದಕ್ಕೆ ತನ್ನ ದೊರೆ ಬಾಬರ್ ಸಂತಸಗೊಳ್ಳಲಿ ಎಂದು 'ಬಾಬ್ರಿ ಮಸೀದಿ' ಎಂದು ಹೆಸರಿಡುತ್ತಾನೆ. ರಾಮನ ಜನ್ಮಸ್ಥಳದಲ್ಲಿದ್ದ ಮಂದಿರವನ್ನು ಒಡೆದು ಕಟ್ಟಿದ ಮಸೀದಿಯಾದ ಕಾರಣ ಲೋಕರೂಢಿಯಾಗಿ ಈ ಮಸೀದಿ 'ಜನ್ಮಸ್ಥಾನ್ ಮಸೀದಿ' ಎಂಬ ಹೆಸರನ್ನೂ ಪಡೆದುಕೊಳ್ಳುತ್ತದೆ. ರಾಮಜನ್ಮಸ್ಥಾನದ ಗೋಡೆಗಳ ಮೇಲಿನ ಶಾಸನದಲ್ಲಿ ಬಾಬರನ ಆದೇಶದ ಮೇರೆಗೆ ರಾಮಮಂದಿರವನ್ನು ಕೆಡವಿದ ಉಲ್ಲೇಖ ದೊರೆಯುತ್ತದೆ.

**1853:** ಉಪಲಬ್ಧ ದಾಖಲೆಗಳ ಪ್ರಕಾರ ಬಾಬರನ ಆದೇಶದ ಮೇರೆಗೆ ಧ್ವಂಸಗೊಂಡ ಅಯೋಧ್ಯೆಯ ರಾಮಮಂದಿರಕ್ಕಾಗಿ ಮೊದಲ ಹೋರಾಟ 1853ರಲ್ಲಿ ನಡೆಯಿತು.

**1858:** ಬ್ರಿಟಿಷ್ ಸರ್ಕಾರವು ಒಳಗಿನ ಪ್ರಾಂಗಣವು ಮುಸಲ್ಮಾನರ ಸ್ವಾಧೀನಕ್ಕೆ, ಹೊರಾಂಗಣವು ಹಿಂದುಗಳ ಬಳಕೆಗೆ ಬರುವಂತೆ ಬೇಲಿ ನಿರ್ಮಿಸಿತು. ಈ ಬೇಲಿ ಹಿಂದು – ಮುಸ್ಲಿಂ ಬಾಂಧವ್ಯದ ನಡುವಿನ ಅಂತರವನ್ನೂ ಹೆಚ್ಚಿಸುವುದಕ್ಕೆ ಕಾರಣವಾಯಿತು. 1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಿಂದೂ–ಮುಸ್ಲಿಮರು ಒಟ್ಟಾಗಿ ಬ್ರಿಟಿಷರ ಹೋರಾಟ ಮಾಡಿದರ ಪ್ರಖರತೆಯನ್ನು ಬ್ರಿಟಿಷರು ಚೆನ್ನಾಗಿ ಮನಗಂಡಿದ್ದರು. ಅದೇ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಹಿಂದು – ಮುಸ್ಲಿಂ ಒಟ್ಟಾಗಿ ನಿಂತಿದ್ದ ಇನ್ನೊಂದು ಘಟನೆ ರಾಮಮಂದಿರಕ್ಕೆ ಸಂಬಂಧಿಸಿದ್ದು! ಆಗ ಮುಸ್ಲಿಮರು ರಾಮಮಂದಿರ ಕೆಡವಿ ಬಾಬ್ರಿ ಮಸೀದಿ ನಿರ್ಮಿಸಿದ್ದ ಜಾಗವನ್ನು ಹಿಂದುಗಳಿಗೆ ಹಿಂದಿರುಗಿಸಲು ಮುಂದಾಗಿದ್ದರು. ಇದಕ್ಕೆ ಕ್ರಾಂತಿಕಾರಿ ನಾಯಕ ಅಮೀರ್ ಆಲಿ "ಬಂಧುಗಳೇ, ನಮ್ಮ ಸಲುವಾಗಿ ರಕ್ತ ಹರಿಸಲು ಸಿದ್ಧರಿರುವ ಹಿಂದುಗಳಿಗೆ, ಶ್ರೀರಾಮಜನ್ಮಭೂಮಿಯನ್ನು, ಬಾಬರಿ ಮಸೀದಿಯನ್ನು, ಅಲ್ಲಾನ ಇಚ್ಛೆಯಂತೆ ಪುನಃ ಅವರಿಗೆ ಒಪ್ಪಿಸೋಣ. ಮಸೀದಿಯನ್ನು ಅವರಿಗೆ ಒಪ್ಪಿಸಿ ಹಿಂದುಗಳ ಹೃದಯವನ್ನು ಗೆಲ್ಲೋಣ" ಎಂದು ಹೇಳಿರುವ ಮಾತು ಸುಲ್ತಾನಪುರ ಗೆಜೆಟ್‌ನಲ್ಲಿ (ಪು.36) ದಾಖಲಾಗಿದೆ.

**1885–1886:** 1885ರಲ್ಲಿ ಮಹಂತ ರಘುವೀರದಾಸರು ಪೂರ್ವದಿಕ್ಕಿನ ಚಬೂತರಾದಲ್ಲಿ ದೇವಾಲಯ ನಿರ್ಮಾಣಕ್ಕೆ ಅವಕಾಶಕೋರಿ ಫೈಜಾಬಾದ್ ಜಿಲ್ಲಾ ನ್ಯಾಯಾಲಯದಲ್ಲಿ ಉಪನ್ಯಾಯಾಧೀಶರೆದುರು ಅರ್ಜಿ ಸಲ್ಲಿಸಿದರು. (ಕೇಸ್ 61/280) 1886ರಲ್ಲಿ ಹಿಂದುಗಳ ಪವಿತ್ರ ಸ್ಥಳದಲ್ಲಿ ಮಸೀದಿ ನಿರ್ಮಾಣವಾಗಲಿ ಎಂಬ ಕೋರ್ಟಿನ ಅಭಿಪ್ರಾಯವನ್ನು ಎಲ್ಲರಿಗೂ ತಿಳಿಯುವಂತೆ ಮಾಡಲು ರಘುವೀರದಾಸರು ಹೂಡಿದ ಖಟ್ಲೆ ತಿರಸ್ಕೃತಗೊಂಡಿತು.

**1949:** 1949ರ ಡಿಸೆಂಬರ್ 22ರಂದು ಮಧ್ಯರಾತ್ರಿ ಇದ್ದಕ್ಕಿದಂತೆ ಮಸೀದಿಯ ಒಳಗೆ ಶ್ರೀರಾಮ ಲಕ್ಷ್ಮಣರ ವಿಗ್ರಹಗಳು



ಕಾಣಿಸಿಕೊಂಡವು. ಡಿಸೆಂಬರ್ 23ರಂದು ಈ ಪ್ರಕರಣ ಎಫ್‌ಐಆರ್ (ಎಫ್‌ಐಆರ್ ನಂ. 167/49) ಆಗುತ್ತದೆ. ಕಾನೂನು ಪ್ರಕ್ರಿಯೆ ಒಂದು ಕಡೆ ಆಗುತ್ತಿದ್ದರೆ ಮತ್ತೊಂದೆಡೆ ರಾಮಲಲ್ಲಾನ ವಿಗ್ರಹ ಸ್ಥಾಪನೆಗೊಂಡ ಸ್ಥಳದಲ್ಲಿ ಕೀರ್ತನೆಸತ್ರ ಪ್ರಾರಂಭಗೊಂಡಿತು.

**1950ರ ದಶಕ:** 1950ರಲ್ಲಿ ರಾಮಭಕ್ತ ಗೋಪಾಲಸಿಂಗ್, ರಾಮನ ಪ್ರತ್ಯಕ್ಷಪೂಜೆಗೆ ಅಡ್ಡಿಬರುವ ಆತಂಕಗಳನ್ನು ಕೊನೆಗಾಣಿಸಬೇಕೆಂದು ಭಗವಾನ್ ಶ್ರೀರಾಮ ವಿರಾಜಮಾನ್ ಅವರ ಪರವಾಗಿ ಅರ್ಜಿ ದಾಖಲಿಸಲಾಯಿತು. 4 ವರ್ಷಗಳು ಕಳೆದರೂ ದಾವೆ ಇತ್ಯರ್ಥವಾಗದ ಕಾರಣ ತ್ವರಿತ ಗತಿಯಲ್ಲಿ ತೀರ್ಪು ಬರಲಿ ಎಂದು 1955ರಲ್ಲಿ ಅಲಹಬಾದ್ ಹೈಕೋರ್ಟ್ ಟಿಪ್ಪಣಿ ನೀಡಿತು. 1959ರಲ್ಲಿ ರಾಮಜನ್ಮಭೂಮಿ ತಮಗೆ ಸೇರಿದ್ದು ಎಂದು ನಿರ್ಮೋಹಿ ಆಖಾಡಾ ಅರ್ಜಿ ಸಲ್ಲಿಸಿತು.

**1980ರ ದಶಕ:** ರಾಮಜನ್ಮಭೂಮಿಗಾಗಿಯ ಹೋರಾಟ ರಾಷ್ಟ್ರವ್ಯಾಪಿ ಆಂದೋಲನ ರೂಪವನ್ನು ಪಡೆದಿದ್ದು 1980ರ ದಶಕದಲ್ಲಿ. 1984ರ ಅಕ್ಟೋಬರ್ 10ರಂದು ಸರಯೂ ನದಿ ತಟದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಮಂದಿ ರಾಮಭಕ್ತರು ನದಿಯ ಜಲವನ್ನು ಬೊಗಸೆಯಲ್ಲಿ ಹಿಡಿದು ರಾಮಜನ್ಮಭೂಮಿಯ ಬಿಡುಗಡೆಗೆ ಸಾಮೂಹಿಕ ಸಂಕಲ್ಪ ಸ್ವೀಕರಿಸಿದರು. 1984ರ ರಾಮಜಾನಕಿ ರಥಯಾತ್ರೆಗಳು ಜನಜಾಗೃತಿಯಲ್ಲಿ ಪ್ರಧಾನ ಪಾತ್ರವಹಿಸಿದವು. 1985ರಲ್ಲಿ ಉಡುಪಿಯಲ್ಲಿ ನಡೆದ ಧರ್ಮ ಸಂಸತ್ತಿನಲ್ಲಿ ದೇವಸ್ಥಾನಕ್ಕೆ ಹಾಕಲಾಗಿದ್ದ ಬೀಗವನ್ನು ತೆರೆಯದಿದ್ದರೆ ಸಂತರು ಆಮರಣಾಂತ ಉಪವಾಸವನ್ನು ಕೈಗೊಳ್ಳುವ ನಿರ್ಧಾರವನ್ನು ಪ್ರಕಟಿಸುತ್ತದೆ. 1986 ಫೆಬ್ರವರಿ 1 ರಂದು ತಾತ್ಕಾಲಿಕವಾಗಿದ್ದ ರಾಮಮಂದಿರಕ್ಕೆ ಹಾಕಲಾಗಿದ್ದ ಬೀಗವನ್ನು ತೆಗೆಯಬೇಕೆಂದೂ, ಪ್ರತಿದಿನವೂ ಅಲ್ಲಿ ಒಂದು ಗಂಟೆಯ ಕಾಲ ಶ್ರೀರಾಮನ ಪೂಜೆ ನಡೆಯಬೇಕೆಂದೂ ಜಿಲ್ಲಾ ನ್ಯಾಯಾಲಯವು ಆದೇಶಿಸಿತು. ನವೆಂಬರ್ 9, 1989ರಲ್ಲಿ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತ ಕಾಮೇಶ್ವರ ಚೌಪಾಲರು ಅಯೋಧ್ಯೆಯ ರಾಮಮಂದಿರಕ್ಕೆ ಅಡಿಗಲ್ಲನ್ನಿಟ್ಟರು.

**ಸೋಮನಾಥ–ಅಯೋಧ್ಯಾ ರಥಾಯಾತ್ರೆ:** 25–9–1990ರಂದು ಲಾಲ್‌ಕೃಷ್ಣ ಅಡ್ವಾಣಿ ಅವರು ಸೋಮನಾಥ – ಅಯೋಧ್ಯಾ ರಥಯಾತ್ರೆಯನ್ನು ಪ್ರಾರಂಭಿಸಿದರು. ಈ ಯಾತ್ರೆ ಗುಜರಾತ್, ಮಹಾರಾಷ್ಟ್ರ, ಆಂಧ್ರಪ್ರದೇಶ, ಮಧ್ಯಪ್ರದೇಶ, ಬಿಹಾರ್ ಮತ್ತು ಉತ್ತರ ಪ್ರದೇಶ ರಾಜ್ಯಗಳನ್ನೊಳಗೊಂಡ 10000 ಕಿ.ಮೀ ಆಗಿತ್ತು. ಆದರೆ 26 ದಿನಗಳ ನಂತರ ಬಿಹಾರಿನ ಮುಖ್ಯಮಂತ್ರಿ ಲಾಲೂಪ್ರಸಾದ್ ಯಾದವ್ ಸಮಷ್ಟಿಪುರಲ್ಲಿ ಅಕ್ಟೋಬರ್ 22, 1990ರಂದು ಲಾಲ್ ಕೃಷ್ಣ ಅಡ್ವಾನಿ ಅವರನ್ನು ಬಂಧಿಸಲು ಆಜ್ಞೆ ನೀಡುವ ಮೂಲಕ ಯಾತ್ರೆಯ ಯಶಸ್ಸಿಗೆ ಅಡ್ಡಿಯಾದರು. ಆಗ ಅಟಲ್ ಬಿಹಾರಿ ವಾಜಪೇಯಿ ಅಂದಿನ ಪ್ರಧಾನಮಂತ್ರಿ ವಿಶ್ವನಾಥ ಪ್ರತಾಪ್ ಸಿಂಗ್ ಅವರಿಗೆ ನೀಡಿದ್ದ ಬೆಂಬಲವನ್ನು ಹಿಂಪಡೆದುದರ ಪರಿಣಾಮ ಸರ್ಕಾರ ಅಲ್ಪಮತಕ್ಕೆ ಕುಸಿದು ವಿ.ಪಿ.ಸಿಂಗ್ ರಾಜೀನಾಮೆ ನೀಡಬೇಕಾಯಿತು. ಅಡ್ವಾಣಿಯವರ ಬಂಧನದ ತರುವಾಯ ರಾಷ್ಟ್ರಾದ್ಯಂತ ನಡೆದ ಸ್ವಪ್ರೇರಣೀಯ ಬಂದ್ ಅಯೋಧ್ಯೆ ರಾಷ್ಟ್ರದ ಪ್ರಮುಖ ವಿಷಯ ಎನ್ನುವುದನ್ನು ಜಗಜ್ಜಾಹೀರು ಮಾಡಿತು. ಅಕ್ಟೋಬರ್ 30, 1990ರಂದು ಕಾರಸೇವೆಗಾಗಿ ಅಯೋಧ್ಯೆಯಲ್ಲಿ ನೆರೆದಿದ್ದ ಸಹಸ್ರಾರು ಸಂಖ್ಯೆಯ ಕಾರಸೇವಕರ ಮೇಲೆ ಗೋಲಿಬಾರ್ ನಡೆದು 50–60 ಮಂದಿ ಸಾವನ್ನಪ್ಪಿದರು, ನೂರಾರು ಮಂದಿ ಗಾಯಾಳುಗಳಾದರು.

**ಡಿಸೆಂಬರ್ 6, 1992:** ಅಂದು ರಾಷ್ಟ್ರದ ಹಲವು ಕಡೆಗಳಿಂದ ಅಯೋಧ್ಯೆಗೆ ಬಂದು ಸೇರಿದ್ದ 3–4 ಲಕ್ಷ ಮಂದಿ ಕಾರಸೇವಾ ಸಮೂಹ ನೋಡುನೋಡುತ್ತಿದ್ದಂತೆ ರಾಮಮಂದಿರದ ಮೇಲೆ ನಿರ್ಮಾಣ ಮಾಡಿದ್ದ ಬಾಬ್ರಿ ಮಸೀದಿಯ ಮೂರು ಗುಂಬಜ್‌ಗಳನ್ನು ಕ್ಷಣದಲ್ಲಿ ಧರಾಶಾಹಿಗೊಳಿಸಿತು. ರಾಮ, ಲಕ್ಷ್ಮಣ, ಸೀತೆ ಮತ್ತು ಹನುಮಂತನ ವಿಗ್ರಹಗಳನ್ನು ಸ್ಥಾಪಿಸಿ ತಾಕ್ಕಾಲಿಕ ಮಂದಿರವನ್ನೂ ನಿರ್ಮಾಣ ಮಾಡಲಾಯಿತು. ಪರಿಸ್ಥಿತಿ ದಿನದಿನವೂ ವಿಪರೀತವಾಗುತ್ತಾ ಹೋದ ಪರಿಣಾಮ ಅಯೋಧ್ಯೆಯ 67 ಎಕರೆ ಇಡೀ ಪ್ರದೇಶವನ್ನು ಸರ್ಕಾರ ವಶಪಡಿಸಿಕೊಂಡಿತು.

ಅನೇಕ ಸಾಮಾಜಿಕ, ರಾಜಕೀಯ ಬೆಳವಣಿಗೆಗಳ ಜೊತೆಗೆ ನ್ಯಾಯಾಂಗ ಹೋರಾಟವೂ ನಡೆಯುತ್ತಿತ್ತು. 2010 ಸೆಪ್ಟೆಂಬರ್ 9ರಂದು 2.77 ವಿವಾದಿತ ಜಮೀನಿನ 2/3 ಭಾಗ ಹಿಂದುಗಳಿಗೆ, 1/3 ಭಾಗ ಮುಸಲ್ಮಾನರಿಗೆ ಎಂಬ ತೀರ್ಪನ್ನು ಅಲಹಾಬಾದ್ ಹೈಕೋರ್ಟ್‌ನ ತ್ರಿಸದಸ್ಯ ಪೀಠ ನೀಡಿತು. ಆದರೆ ಎಲ್ಲಾ ಪಕ್ಷಗಳು ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದ ಪರಿಣಾಮ 2011ರ ಮೇ 9ರಂದು ಸುಪ್ರೀಂ ಕೋರ್ಟ್ ಅಲಹಾಬಾದ್ ನ್ಯಾಯಾಲಯ ನೀಡಿದ ತೀರ್ಪನ್ನು ರದ್ದು ಮಾಡಿ ಮೇಲ್ಮನವಿಗೆ ಅವಕಾಶ ನೀಡಿತು. ತದನಂತರದಲ್ಲಾದ ಅನೇಕ ಮಾತುಕಥೆ, ನ್ಯಾಯಾಂಗ ಪ್ರಕ್ರಿಯೆಗಳು, ವಿರೋಧಗಳು, ನಿರ್ಧಾರಗಳಿಗೆ 2019ರ ನವೆಂಬರ್ 9ರ ಸುಪ್ರೀಂಕೋರ್ಟ್‌ನ ಪಂಚ ಸದಸ್ಯ ಪೀಠವು ಇತಿಶ್ರೀ ಹಾಡಿತು. ವಿವಾದಿತ 2.77ಎಕರೆ ಸಂಪೂರ್ಣ ಭೂಮಿ ಹಿಂದೂಗಳಿಗೆ ಸಂಬಂಧಿಸಿದ್ದು ಎನ್ನುವ ತೀರ್ಪು ನೀಡಿತು. 5 ಶತಮಾನಗಳ ಅಯೋಧ್ಯೆಯ ರಾಮಜನ್ಮಭೂಮಿ ಹೋರಾಟಕ್ಕೆ ಸಂದ ಜಯ ಅದಾಗಿತ್ತು. ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ದೇವಾಲಯದ ನಿರ್ಮಾಣದ ಮೇಲ್ವಿಚಾರಣೆ ಮತ್ತು ನಿರ್ವಹಣೆಗಾಗಿ ಟ್ರಸ್ಟ್ ನ್ನು ಸ್ಥಾಪಿಸಲು ಕೇಂದ್ರಸರ್ಕಾರಕ್ಕೆ ನ್ಯಾಯಾಲಯ ಸೂಚಿಸಿದ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು 5 ಫೆಬ್ರವರಿ 2020ರಂದು ಲೋಕಸಭೆಯಲ್ಲಿ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ರಚನೆಯನ್ನು ಘೋಷಿಸಿದ್ದು ಒಂದು ಐತಿಹಾಸಿಕ ಮೈಲಿಗಲ್ಲು.


ನ್ಯಾಯಾಲಯಗಳ ಹೋರಾಟಕ್ಕೂ ಮುನ್ನ ರಾಮಜನ್ಮಭೂಮಿಗಾಗಿ 1528ರಿಂದ 1946ರವರೆಗೆ 76 ಸಶಸ್ತ್ರ ಯುದ್ಧಗಳು ನಡೆದ ವರದಿಗಳಿವೆ. ಒಂದೂವರೆ ಲಕ್ಷ ಮಂದಿ ರಾಮಭಕ್ತರು ಬಲಿದಾನಗೈದಿದ್ದಾರೆ. ಇವರೆಲ್ಲರ ಧೈರ್ಯ, ಸಾಹಸ, ತ್ಯಾಗ, ಬಲಿದಾನಗಳ ಪ್ರತಿಫಲವಾಗಿ, ನಾಡಿನ ಅಸ್ಮಿತೆಯ ಪ್ರತೀಕವಾಗಿ, ರಾಮಮಂದಿರ ರಾಷ್ಟ್ರಮಂದಿರವಾಗಿ ನಿರ್ಮಾಣಗೊಳ್ಳುತ್ತಿದ್ದು ಜನವರಿ 22, 2024 ರಂದು ಲೋಕಾರ್ಪಣೆಗೊಳ್ಳಲಿದೆ. ■

# ಸಂಸ್ಮರಣೆ | ಭಾರತೀಯ ನೌಕಾಪಡೆ ದಿನ – ಡಿಸೆಂಬರ್ 4

ಭಾರತದ ಸಾಧನೆ ಮತ್ತು ಪರಾಕ್ರಮವನ್ನು ಬರಿಯ ಮಾತುಗಳಲ್ಲಿ ಹೇಳುವುದು ಕಷ್ಟ ಸಾಧ್ಯ. ಈ ನಾಡಿನ ಶೌರ್ಯದ ಅನ್ವರ್ಥವಾಗಿ ನಿಲ್ಲಬಲ್ಲ ವ್ಯವಸ್ಥೆಗಳಲ್ಲಿ ಭಾರತೀಯ ನೌಕಪಡೆಯೂ ಪ್ರಮುಖವಾದದ್ದು. ಡಿ.4 ರಂದು ರಾಷ್ಟ್ರೀಯ ನೌಕಾಪಡೆ ದಿನವನ್ನು ನಾವು ಆಚರಿಸುತ್ತೇವೆ.

**ಭಾರತೀಯ ನೌಕಪಡೆಯ ಸಾಧನೆ:** ಸರಿಯಾಗಿ 52 ವರ್ಷಗಳ ಹಿಂದೆ ಇಂಡೋ– ಪಾಕ್ ಯುದ್ಧದ ಸಂದರ್ಭದಲ್ಲಿ ಪಾಕಿಸ್ತಾನವು ಸೋಲಿನ ಭೀತಿ ಅನುಭವಿಸಿತು. ಸೋಲಿನಿಂದ ಹತಾಶರಾಗಿದ್ದ ಪಾಕಿಗಳು ಹೇಗಾದರೂ ಭಾರತೀಯರನ್ನು ಹಿಮ್ಮೆಟ್ಟಿಸಬೇಕು ಎಂದು ನಿರ್ಧರಿಸಿ ತನ್ನ ಕೆಟ್ಟ ಚಾಳಿಯಿಂದ ಕಳ್ಳ ದಾರಿಯನ್ನು ಹಿಡಿದು 1971ರ ಡಿಸೆಂಬರ್ ಮೂರರ ಸಂಜೆ ಇದ್ದಕ್ಕಿದ್ದಂತೆ ಭಾರತೀಯ ವಾಯುನೆಲೆಗಳ ಮೇಲೆ ಆಕ್ರಮಣ ಪ್ರಾರಂಭಿಸಿತು. ಅದಕ್ಕೆಲ್ಲ ಕ್ಯಾರೆ ಎನ್ನದ ಭಾರತವು ಸ್ವಲ್ಪವೂ ವಿಚಲಿತವಾಗದೆ ಪಾಕಿಸ್ತಾನದ ದಾಳಿಗೆ ಪ್ರತ್ಯುತ್ತರವಾಗಿ ನಿರ್ಘಾಟ್, ವೀರ್ ಮತ್ತು ನಿಪತ್ ಎನ್ನುವ 3 ಕ್ಷಿಪಣಿ ದೋಣಿಗಳನ್ನು ಕರಾಚಿ ಕಡೆಗೆ ರವಾನಿಸಿತು. ಅಷ್ಟೇ ಅಲ್ಲದೆ ಆಪರೇಷನ್ ಟ್ರೈಡೆಂಟ್ ಸಮಯದಲ್ಲಿ ಭಾರತೀಯ ನೌಕಾಪಡೆಯು PNS ಖೈಬರ್ ಸೇರಿದಂತೆ ನಾಲ್ಕು ಪಾಕಿಸ್ತಾನಿ ಹಡಗುಗಳನ್ನು ಮುಳುಗಿಸಿ ಗಹಗಹಿಸಿತು. ಜತೆಗೆ ನೂರಾರು ಪಾಕಿಸ್ತಾನಿ ನೌಕಾಪಡೆ ಸಿಬ್ಬಂದಿಗಳನ್ನು ಸಂಹರಿಸಲಾಯಿತು ಭಾರತದ ನೌಕಾಪಡೆಯ ಅಂದಿನ ಮಹತ್ವದ ಸಾಧನೆಯನ್ನು ಭಾರತೀಯರು ನೆನಪಿಸಿಕೊಳ್ಳಬೇಕು ಎಂಬ ಸಲುವಾಗಿ ಪ್ರತಿ ವರ್ಷ ಡಿಸೆಂಬರ್ 4ರಂದು ನೌಕಾಪಡೆಯ ದಿನವನ್ನಾಗಿ ಭಾರತವು ಆಚರಿಸುತ್ತಿದೆ.

**ಭಾರತದ ನೌಕಾಪಡೆ ನಮ್ಮ ಹೆಮ್ಮೆ:** ಭಾರತೀಯ ನೌಕಾಪಡೆಯು ಭಾರತೀಯ ರಕ್ಷಣೆ ಪಡೆಗಳ ಒಂದು ಅಂಗವಾಗಿದೆ. ಅದರಲ್ಲೂ ನಮ್ಮ ನೌಕಾಪಡೆ ಜಗತ್ತಿನ ಐದನೆಯ ಅತಿದೊಡ್ಡ ನೌಕಾಪಡೆಯಾಗಿದೆ. ಭಾರತೀಯ ನೌಕಾಪಡೆ 155 ನೌಕೆಗಳನ್ನು ಹೊಂದಿದ್ದು, ಬಲಿಷ್ಠವಾದ ಐ.ಎನ್.ಎಸ್.ವಿರಾಟ್ ಎಂಬ ವಾಯು ಯುದ್ಧನೌಕೆಯನ್ನು ಹೊಂದಿದೆ. ಸಂಪೂರ್ಣ ಏಷ್ಯಾ ಖಂಡದಲ್ಲಿರುವ ಎರಡು ವಾಯು




ಯುದ್ಧ ನೌಕೆಗಳಲ್ಲಿ ಇದು ಒಂದು. ಅಲ್ಲಿ 2000ಕ್ಕೂ ಹೆಚ್ಚು ನೌಕಾ ಕಮಾಂಡೋಗಳಿದ್ದಾರೆ.

**ಭಾರತೀಯ ನೌಕಾಪಡೆ ಮತ್ತು ಛತ್ರಪತಿ ಶಿವಾಜಿ:** ಮಹಾರಾಜ ಶಿವಾಜಿ ಭಾರತೀಯ ನೌಕಾಪಡೆಯ ಪಿತಾಮಹ. ಇತ್ತೀಚೆಗಷ್ಟೇ ನೌಕಾಪಡೆಯ ಧ್ವಜದಲ್ಲಿ ಶಿವಾಜಿ ಮಹಾರಾಜರ ರಾಜ ಮುದ್ರೆಯನ್ನು ಹಾಕಲಾಗಿದೆ. ಅಷ್ಟಕ್ಕೂ ದೇಶಕ್ಕೆ ಸ್ವಾತಂತ್ರ್ಯ ಲಭಿಸುವವರೆಗೂ ಸೇಂಟ್ ಜಾರ್ಜ್ ಕ್ರಾಸ್ ಎನ್ನಲಾಗುವ ಕೆಂಪು ಬಣ್ಣದ ಪ್ಲಸ್ ಆಕಾರದ ಒಂದು ಮೂಲೆಯಲ್ಲಿ ಬ್ರಿಟನ್ ಧ್ವಜವನ್ನು ಅಳವಡಿಸಲಾಗಿತ್ತು. 1950ರಲ್ಲಿ ಯೂನಿಯನ್ ಜಾಕ್ ಸ್ಥಳದಲ್ಲಿ ಭಾರತದ ರಾಷ್ಟ್ರಧ್ವಜವನ್ನು ನೌಕಾಪಡೆಗೆ ಅಳವಡಿಸಿದರು. ಮತ್ತೆ 2001ರಲ್ಲಿ ತ್ರಿವರ್ಣ ಧ್ವಜವನ್ನು ಉಳಿಸಿಕೊಂಡು ಸೇಂಟ್ ಜಾರ್ಜ್ ಕ್ರಾಸ್ ತೆಗೆಯಲಾಯಿತು, ಒಂದು ಕಡೆಗೆ ನೌಕಾದಳದ ಲಾಂಛನವನ್ನು ಅಳವಡಿಸಲಾಯಿತು. 2004ರಲ್ಲಿ ಮತ್ತೆ ಹಿಂದಿನ ಸ್ಥಿತಿಗೆ ಧ್ವಜದ ಸ್ವರೂಪ ಬದಲಾಯಿತು. ಆದರೆ ಇದೀಗ ಮತ್ತೆ ನೌಕಾದಳದ ಲಾಂಛನವನ್ನು ಸೇರ್ಪಡೆ ಮಾಡಿ ಸೇಂಟ್ ಜಾರ್ಜ್ ಕ್ರಾಸ್ ಅನ್ನು ತೆಗೆದುಹಾಕಲಾಗಿದೆ. ಈಗ ಹೊಸ ಧ್ವಜದಲ್ಲಿ ಒಂದು ಮೂಲೆಯಲ್ಲಿ ತ್ರಿವರ್ಣ ಧ್ವಜವಿದ್ದರೆ ಮತ್ತೊಂದು ಮೂಲೆಯಲ್ಲಿ ನೌಕಾದಳದ ಲಾಂಛನವಿದೆ. ಇದರಲ್ಲೂ ಬದಲಾವಣೆ ಮಾಡಲಾಗಿದ್ದು, ಹಿನ್ನೆಲೆ ಬಣ್ಣವಾಗಿ ನೇವಿ ಬ್ಲೂ ಬಳಸಲಾಗಿದೆ. ಅದೆಲ್ಲಕ್ಕಿಂತಲೂ ಹೆಚ್ಚಾಗಿ ಈ ಭಾಗದ ಆಕಾರವನ್ನು ಅಷ್ಟಕೋನವಾಗಿ ರೂಪಿಸಲಾಗಿದೆ. ಅಷ್ಟಕೋನ ಎನ್ನುವುದು, ಅಷ್ಟ ದಿಕ್ಕುಗಳಲ್ಲೂ ಸಮುದ್ರವನ್ನು ಕಾಯುವ ಸಂಕಲ್ಪವನ್ನು ಮೂಡಿಸುತ್ತದೆ. ವಿಶೇಷವೆಂದರೆ ಛತ್ರಪತಿ ಶಿವಾಜಿ ಮಹಾರಾಜರ ರಾಜಮುದ್ರೆಯೂ ಇದೇ ಅಷ್ಟಕೋನಾಕಾರವನ್ನು ಹೊಂದಿತ್ತು. ಶಿವಾಜಿ ಮಹಾರಾಜರ ಶೌರ್ಯ ಮತ್ತು ಸಾಧನೆಗಳನ್ನು ನೆನಪು ಮಾಡಿಕೊಂಡು ಅವರಿಗೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಧ್ವಜದಲ್ಲಿ ಶಿವಾಜಿ ಮಹಾರಾಜರ ರಾಜ ಮುದ್ರೆಯನ್ನು ಸೇರಿಸಲಾಗಿದೆ.

## ಸಂಘದ ಪ್ರವೇಶದಿಂದ ಗಣಿತದ ಸಮಸ್ಯೆ ಮಾಯ




ದೂರದ ಚೀನಾ ಗಡಿಯಲ್ಲಿ ಹಿಮಾಚ್ಛಾದಿತ ತವಾಂಗ್‌ನಿಂದ 56 ಕಿ.ಮೀ ದೂರದಲ್ಲಿ, ದುರ್ಗಮವಾದ 8000 ಅಡಿ ಎತ್ತರದ ಸ್ಥಳ ಬೋಮ್ದಿಲಾ. ಮಹಾರಾಷ್ಟ್ರದಿಂದ ಅರುಣಾಚಲಕ್ಕೆ ಸಂಘ ಪ್ರಚಾರಕರಾಗಿ ಬಂದಿದ್ದ ರಾಜೇಶ್ ಅವರು ಅಲ್ಲಿನ ಬಸ್ ನಿಲ್ದಾಣದಲ್ಲಿ ಇಳಿಯುವಾಗ ಒಂದು ವಿಚಿತ್ರ ದೃಶ್ಯ ಕಂಡರು. ಹದಿಹರೆಯದ ಸುಮಾರು 70 ರಷ್ಟು ಹುಡುಗರು ಮತ್ತು ಹುಡುಗಿಯರು ದುಃಖಾರ್ತರಾಗಿ ಕುಳಿತಿದ್ದರು. ಗಣಿತ ವಿಷಯದಲ್ಲಿನ ಫೇಲಾಗುವ ಭಯವೇ ಈ ಎಲ್ಲಾ ಮುಖಗಳು ಬಾಡಲು ಕಾರಣವೆಂದು ತಿಳಿದು ರಾಜೇಶ್ ಅವರು ಅಚ್ಚರಿಗೊಂಡರು. ಬೋಮ್ದಿಲಾ ಒಂದರಲ್ಲೇ 300 ವಿದ್ಯಾರ್ಥಿಗಳು ಗಣಿತಶಾಸ್ತ್ರದಲ್ಲಿ ಅನುತ್ತೀರ್ಣರಾಗಿದ್ದರು. ಅವರೆಲ್ಲರೂ ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಬಯಸಿದ್ದುದೂ ಆತಂಕದ ಸಂಗತಿಯಾಗಿತ್ತು. ಗಣಿತದ ಭಯದ ಕಾರಣದಿಂದ ಇಷ್ಟೊಂದು ಯುವಜನರ ಭವಿಷ್ಯ ವಿನಾಶದಂಚಿನಲ್ಲಿತ್ತು. ಈ ವೇದನೆಯ ಘಟನೆ ಅರುಣಾಚಲ ಸೇವಾಭಾರತಿಗೆ ಸೇವೆಯ ಹೊಸಮಾರ್ಗವನ್ನು ತೋರಿಸಿತು.

ಈ ವಿದ್ಯಾರ್ಥಿಗಳ ಗಣಿತದ ಭಯವನ್ನು ಹೊಡೆದೋಡಿಸುವತ್ತ ಸೀಮಿತ ಅವಧಿಯಲ್ಲಿ ಪೂರ್ತಿ ಸಿಲಬಸ್ ಪೂರೈಸುವಂಥ 70 ದಿನಗಳ ಕ್ರಾಶ್ ಕೋರ್ಸ್ ರೂಪಿಸಲಾಯಿತು. ಸಮರ್ಪಣಾಭಾವದ ತರುಣ ಸ್ವಯಂಸೇವಕರು ತುಂಬು ಮನಸ್ಸಿನಿಂದ ದೂರದೂರದ ಊರುಗಳಿಗೆ ಹೋಗಿ ಆಸಕ್ತಿದಾಯಕ ಹಾಗೂ ಸರಳವಾದ ವಿಧಾನಗಳಿಂದ




ಗಣಿತ ಪಾಠ ಪ್ರಾರಂಭಿಸಿದರು. 2009ರಲ್ಲಿ ಆರಂಭವಾದ ಈ ಅನನ್ಯ ಪ್ರಯೋಗದಿಂದಲೇ ಇಲ್ಲಿನ ವಿದ್ಯಾರ್ಥಿಗಳ ಗಣಿತದ ಭಯ ದೂರವಾಯಿತಲ್ಲದೆ, 8000 ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ಪಿಯುಸಿಯಲ್ಲಿ ತೇರ್ಗಡೆಯಾಗಿ ಹೆಚ್ಚಿನ ಶಿಕ್ಷಣ ಪಡೆದರು. ಇವರಲ್ಲಿ ಬಹುತೇಕರು ಇಂದು ಉನ್ನತ ಸ್ಥಾನಗಳಲ್ಲಿದ್ದಾರೆ.

ಈಶಾನ್ಯ ಭಾಗದ ಜನಜೀವನ, ಪರಿಸ್ಥಿತಿಗಳನ್ನು ನಮ್ಮಿಂದ ಊಹಿಸಲೂ ಅಸಾಧ್ಯ. ಅಭದ್ರ ಜೀವನವನ್ನು ನಡೆಸುವ ಇಲ್ಲಿನ ಮಕ್ಕಳಿಗಾಗಿ ಸರ್ಕಾರವೇನೋ ಶಾಲೆಗಳನ್ನು ತೆರೆದಿತ್ತು. ಆದರೆ ಅಲ್ಲಿ ಕೆಲವೊಮ್ಮೆ ಶಿಕ್ಷಕರೇ ಬರುತ್ತಿರಲಿಲ್ಲ. ಇನ್ನು ಕೆಲವೊಮ್ಮೆ ವಿದ್ಯಾರ್ಥಿಗಳೇ ಬರುತ್ತಿರಲಿಲ್ಲ. ಇಂತಹ ಕಠಿಣ ಸವಾಲುಗಳ ನಡುವೆ ಅರುಣಾಚಲದ ಸೇವಾಭಾರತಿ, ಈ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ಮತ್ತು ಅವರಲ್ಲಿ ಆತ್ಮವಿಶ್ವಾಸ ಮೂಡಿಸುವ ಪಣ ತೊಟ್ಟಿತು. ಬಿ.ಟೆಕ್ ಮಾಡಿದ ನಂತರ, ಸೇವಾ ಮನೋಭಾವದ ಯುವಕನೊಬ್ಬ, ಮೊದಲ ಬಾರಿಗೆ ತನ್ನ ಕೆಲಸದಿಂದ 40 ದಿನಗಳ ರಜೆ ತೆಗೆದುಕೊಂಡು, ಪುಣೆಯಿಂದ ಬೋಮ್ದಿಲಾ ಮಕ್ಕಳಿಗೆ ಗಣಿತದ ಕ್ರಾಶ್ ಕೋರ್ಸ್ ಮಾಡಲು ಬಂದ. ಸಂಘದ ಈ ನಿಸ್ವಾರ್ಥಿ ಸ್ವಯಂಸೇವಕ ಅರುಣಾಚಲದ ಹಲವು ಕುಗ್ರಾಮಗಳಲ್ಲಿ 2009ರಿಂದ ಇಂದಿಗೂ ಗಣಿತ ಕಲಿಸುತ್ತಿದ್ದಾನೆ. ಪ್ರತಿ ವರ್ಷ 5–8 ಸ್ಥಳಗಳಲ್ಲಿ ತರಗತಿಗಳನ್ನು ನೀಡಿ 70 ದಿನಗಳಲ್ಲಿ ಗಣಿತದ ಪಠ್ಯಕ್ರಮ ಪೂರ್ಣಗೊಳಿಸುತ್ತಿದ್ದಾನೆ.

ಸೇವಾಭಾರತಿಯ ಕರೆಗೆ ಓಗೊಟ್ಟು, ಕೆಲ ಯುವ ಸ್ವಯಂಸೇವಕರು ಬಂದು, 6 ತಿಂಗಳಿನಿಂದ ಒಂದು ವರ್ಷದವರೆಗೆ ಇಲ್ಲಿದ್ದು ಈ ಮಕ್ಕಳ ಕಲಿಕೆಗೆ ಸಹಾಯ ಮಾಡುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಪ್ರಾಂಶುಪಾಲರ ಅನುಮತಿಯಿಂದ ನಡೆಸಲ್ಪಡುವ ಈ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳು ಸುಸಂಸ್ಕೃತ ಹಾಗೂ ದೇಶಭಕ್ತ ನಾಗರಿಕರಾಗಲೂ ಪ್ರೇರೇಪಿಸಲ್ಪಡುತ್ತಾರೆ. ಅರುಣಾಚಲದ ಸೇವಾಭಾರತಿಯ ಜೊತೆ ಪುಣೆಯ ಜ್ಞಾನಪ್ರಬೋಧಿನಿ ಸಂಸ್ಥೆಯೂ ಈ ಕಾರ್ಯದಲ್ಲಿ ಕೈಜೋಡಿಸಿದೆ. 450ಕ್ಕೂ ಹೆಚ್ಚಿನ ಉನ್ನತ ಶಿಕ್ಷಣ ಪಡೆದವರು ಅರುಣಾಚಲಕ್ಕೆ ಬಂದು ಈ ದುರ್ಗಮ ಪರ್ವತ ಪ್ರದೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಹರಡುವ ಗುರಿಯೊಂದಿಗೆ ವಿಜ್ಞಾನದ ಪ್ರಯೋಗಗಳ ಪ್ರಾತ್ಯಕ್ಷಿಕೆ ಮಾಡಿ ತೋರಿಸುತ್ತಿದ್ದಾರೆ.

## ಎಲ್ರೋ ಕೇಳಿದ ಕಥೆ

### ಸ್ವದೇಶಿ ಆಟಗಳಿಂದ ದೇಶಭಕ್ತಿಯ ಸಂಸ್ಕಾರ

ವಿದೇಶಿ ಆಟಗಳೇ ತುಂಬ ಜನಪ್ರಿಯವಾಗಿದ್ದ ದಿನಗಳು ಅವು. ವಿದ್ಯಾರ್ಥಿಗಳಿಗಂತೂ ಆಗ ಅಂತಹ ಆಟಗಳಲ್ಲಿ ಹೆಚ್ಚಿನ ಒಲವು. ಆದರೆ ಡಾ. ಕೇಶವ ಬಲಿರಾಮ್ ಹೆಡಗೇವಾರ್ ಸಂಘದ ಶಾಖೆಗಳಲ್ಲಿ ಪ್ರಾಧಾನ್ಯ ನೀಡಿದುದು ದೇಶೀಯ ಆಟಗಳಿಗೆ. ಶಾಖೆಗಳಲ್ಲಿ ಹೆಚ್ಚಿನ ಸಮಯ ಬಳಕೆಯಾಗುತ್ತಿದ್ದುದು ಸ್ವದೇಶಿ ಆಟಗಳಿಗೆ. ವಿದೇಶಿ ಆಟಗಳನ್ನು ಸಂಘದ ಶಾಖೆಗಳಲ್ಲಿ ಆಡಿಸಿದಲ್ಲಿ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಬಹುದೆಂದು ಕೆಲವರು ವಾದಿಸುತ್ತಿದ್ದರು. ಕೇವಲ ದೇಶೀಯ ಆಟಗಳನ್ನು ಆಡಿಸಿದ್ದಲ್ಲಿ ಉಪಸ್ಥಿತಿ ಏರುವ ಸಂಭವವಿಲ್ಲ ಎನ್ನುವುದು ಅವರ ಅಭಿಪ್ರಾಯವಾಗಿತ್ತು.


ಆದರೆ ಡಾಕ್ಟರ್‌ಜೀ ಈ ವಾದಕ್ಕೆ ಸೊಪ್ಪು ಹಾಕಲಿಲ್ಲ. “ಸ್ವಯಂಸೇವಕರಲ್ಲಿ ದೇಶಭಕ್ತಿಯ ಸಂಸ್ಕಾರ ಮೈಗೂಡಬೇಕಾದರೆ ನಮ್ಮ ದೇಶದ ಪ್ರತಿಯೊಂದು ಸಂಗತಿಯ ಬಗ್ಗೆಯೂ 'ನಮ್ಮತನದ' ಭಾವವನ್ನು ಅವರು ಅನುಭವಿಸಬೇಕು. ದೇಶೀಯ ಆಟಗಳಲ್ಲಿ ಆ ಗುಣ ಸಹಜವಾಗಿ ಅಡಕವಾಗಿದೆ. ಅಂತಹ ಆಟಗಳನ್ನು ಆಡುವ ಮಾತ್ರದಿಂದಲೇ ಅವು ತಾನಾಗಿ ಆ ಭಾವವನ್ನು ವ್ಯಕ್ತಿಯಲ್ಲಿ ಮೂಡಿಸುತ್ತವೆ. ನಮ್ಮ ಉದ್ದೇಶವನ್ನು ಪೂರೈಸಲು ದೇಶಿಯ ಆಟಗಳೇ ಅತ್ಯಂತ ಅನುಕೂಲ ಸಾಧನಗಳಾಗಿವೆ. ಅವುಗಳಿಗೆ ಬೇಕಾದ ಜಾಗ ಕಡಿಮೆ, ಖರ್ಚು ಇಲ್ಲ, ಶಿಸ್ತು ಮತ್ತು ಗುಣ ನಿರ್ಮಾಣ ಮಾಡುವಲ್ಲಿ ಅವುಗಳ ಪಾತ್ರ ಅದ್ವಿತೀಯವಾದುದು” ಎಂಬುದು ಡಾಕ್ಟರ್‌ಜಿಯವರ ವಾದವಾಗಿತ್ತು ದೇಶೀಯ ಆಟಗಳಿಗೆ ಪ್ರಾಧಾನ್ಯ ನೀಡಿ ನಮ್ಮ ತನದ ಉತ್ತಮ ಸಂಸ್ಕಾರ ನೀಡುವಂತಹ ಸಂಘದ ಶಾಖೆಗಳನ್ನು ವಿಕಾಸಗೊಳಿಸಿದುದು ಡಾಕ್ಟರ್‌ಜಿಯವರ ಅಪ್ರತಿಮ ಪ್ರತಿಭೆಗೊಂದು ಸಾಕ್ಷಿ.

## ಪುಸ್ತಕ ಪರಿಚಯ

### ಭಾರತದಲ್ಲೊಂದು ಸುಂಕದ ಬೇಲಿ

**ಲೇಖಕರು:** ಎಸ್ ಎಸ್ ನರೇಂದ್ರ ಕುಮಾರ್
**ಪ್ರಕಾಶನ:** ರಾಷ್ಟ್ರೋತ್ಥಾನ ಸಾಹಿತ್ಯ
**ಬೆಲೆ:** ರೂ. 125

ಸುಮಾರು ಮೂರೂವರೆ ಶತಮಾನಗಳ ದೀರ್ಘಕಾಲ ಭಾರತದಲ್ಲಿದ್ದ ಬ್ರಿಟಿಷರು ತಾವಿದ್ದಷ್ಟೂ ಕಾಲವೂ ಬಗೆಬಗೆಯಾಗಿ ಇಲ್ಲಿಯ ಸಂಪತ್ತನ್ನು ಕೊಳ್ಳೆಹೊಡೆದರು. ಬ್ರಿಟನ್ನಿನ ಅಂದಿನ ವೈಭವವೆಲ್ಲ ಭಾರತೀಯರ ಬೆವರಿನ ಫಲ; ಆ ವಿಲಾಸ–ವೈಭೋಗಗಳಿಗೆ ರಂಗುತುಂಬಿದ್ದು ಬ್ರಿಟಿಷರು ಹೀರಿದ ಭಾರತೀಯರ ರಕ್ತ! ಬ್ರಿಟಿಷರು ಭಾರತೀಯರನ್ನು ದೋಚುವುದಕ್ಕಾಗಿಯೇ ಅನೇಕ ಕಾನೂನುಗಳನ್ನು ಜಾರಿಗೊಳಿಸಿದರು; ವಿವಿಧ ಬಗೆಯ ತೆರಿಗೆಗಳನ್ನು ವಿಧಿಸಿದರು. ದಿನಬಳಕೆಯ ಅಗತ್ಯವಸ್ತುವಾದ ಉಪ್ಪಿನ ಮೇಲೂ ಸುಂಕ ಹೇರಿದರು; ಉಪ್ಪಿನ ಸಾಗಾಟವನ್ನು ನಿರ್ಬಂಧಿಸಿದರು. ಉಪ್ಪಿನ ಸಾಗಾಟದ ಮೇಲೆ ಹದ್ದಿನ




ಕಣ್ಣಿಡಲು ನಿರ್ದಾಕ್ಷಿಣ್ಯವಾಗಿ ಕಂದಾಯ ವಸೂಲಿ ಮಾಡಲು; ದಕ್ಷಿಣ ಮತ್ತು ಪಶ್ಚಿಮ ಭಾರತದಿಂದ ಪೂರ್ವೋತ್ತರ ಭಾರತಕ್ಕೆ ಉಪ್ಪಿನ ಮುಕ್ತ ಸಾಗಾಟ ನಡೆಯುವುದನ್ನು ತಪ್ಪಿಸಲು ಮುಳ್ಳುಕಂಟಿಗಳಿಂದ ದಟ್ಟ ಪೊದೆಗಳಿಂದ ಕೂಡಿದ 2500 ಮೈಲು ಉದ್ದದ ಸುಂಕದ ಬೇಲಿಯನ್ನು ರೂಪಿಸಿದರು. ಈ ಬೇಲಿಯ ಇಕ್ಕೆಲಗಳಲ್ಲಿ ಕಾವಲಿಗೆಂದು ಸುಮಾರು ಹನ್ನೆರಡು ಸಾವಿರ ಸಿಬ್ಬಂದಿಯನ್ನು ನಿಯೋಜಿಸಿದ್ದರು. ಇಂಥದ್ದೊಂದು ಬೃಹತ್ತಾದ ಬೇಲಿಯ ಜಾಡುಹಿಡಿದು ಹೊರಟ ಬ್ರಿಟಿಷ್ ಪ್ರಜೆ ರಾಯ್ ಮ್ಯಾಕ್ಸ್‌ಹ್ಯಾಮ್ ದಾಖಲಿಸಿದ ಅಪೂರ್ವ ಅನುಭವಗಳ ಸಂಗ್ರಹ ರೂಪ 'ಭಾರತದಲ್ಲೊಂದು ಸುಂಕದ ಬೇಲಿ'.

ವೆಬ್‌ಸೈಟ್: https://www.sahityabooks.com/

ಸಂಪಾದಕೀಯ ಸಹಕಾರ: ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ್ ಉದ್ಯಾವರ, ದೀಕ್ಷಿತ್ ನಾಯರ್ ಮಂಡ್ಯ

## ದೇಶದ ಮೊದಲ ಜಿಪಿಎಸ್ ಟ್ರ್ಯಾಕರ್ ಆಂಕ್ಲೆಟ್ ಪರಿಚಯಿಸಿದ ಜಮ್ಮು-ಕಾಶ್ಮೀರ ಪೊಲೀಸ್



ಜಾಮೀನಿನ ಮೇಲೆ ಹೊರಗಿರುವ ಶಂಕಿತ ಭಯೋತ್ಪಾದಕ ಆರೋಪಿಗಳ ಮೇಲೆ ನಿಗಾ ಇಡಲು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಜಿಪಿಎಸ್ ಟ್ರ್ಯಾಕರ್ ಆಂಕ್ಲೆಟ್‌ಗಳನ್ನು ಪರಿಚಯಿಸಿದೆ. ಈ ಮೂಲಕ ಜಿಪಿಎಸ್ ಟ್ರ್ಯಾಕರ್ ಆಂಕ್ಲೆಟ್ ಪರಿಚಯಿಸಿದ ದೇಶದ ಮೊದಲ ಪೊಲೀಸ್ ಪಡೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಜಿಪಿಎಸ್ ಟ್ರ್ಯಾಕರ್ ಆಂಕ್ಲೆಟ್ ಎನ್ನುವುದು ವ್ಯಕ್ತಿಯ ಪಾದದ ಸುತ್ತಲೂ ಧರಿಸಬಹುದಾದ ಸಾಧನವಾಗಿದ್ದು, ಜಾಮೀನಿನ ಹೊರಗಿರುವ ಶಂಕಿತ ಭಯೋತ್ಪಾದಕರ ಮೇಲ್ವಿಚಾರಣೆ ಮಾಡುತ್ತದೆ ಮತ್ತು ಅವರ ಚಲನೆಯನ್ನು ಟ್ರ್ಯಾಕ್ ಮಾಡುತ್ತದೆ.

## 15 ಕೋಟಿಗೂ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸಿದೆ MSME ವಲಯ

सत्यमेव जयते
MSME
MICRO, SMALL & MEDIUM ENTERPRISES
सूक्ष्म, लघु एवं मध्यम उद्यम

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (MSME) ವಲಯವು 15 ಕೋಟಿಗೂ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ. ಉದ್ಯಮ್ ಪೋರ್ಟಲ್‌ನಲ್ಲಿ ಮೂರು ಕೋಟಿಗೂ ಹೆಚ್ಚು ಎಂಎಸ್‌ಎಂಇ ಘಟಕಗಳ ನೋಂದಣಿಯೊಂದಿಗೆ ಈ ಸಾಧನೆಯನ್ನು ಸುಗಮಗೊಳಿಸುವಲ್ಲಿ ಉದ್ಯಮ್ ಪೋರ್ಟಲ್ ಪ್ರಮುಖ ಪಾತ್ರವನ್ನು ವಹಿಸಿದೆ. ಈ 3 ಕೋಟಿ ನೋಂದಾಯಿತ ಎಂಎಸ್‌ಎಂಇಗಳಲ್ಲಿ 41 ಲಕ್ಷಕ್ಕೂ ಹೆಚ್ಚು ಮಹಿಳಾ ಒಡೆತನದ ಎಂಎಸ್‌ಎಂಇಗಳಾಗಿವೆ. ಸೃಷ್ಟಿಯಾದ 15 ಕೋಟಿ ಉದ್ಯೋಗಾವಕಾಶಗಳ ಪೈಕಿ 3.4 ಕೋಟಿಗೂ ಹೆಚ್ಚು ಉದ್ಯೋಗಾವಕಾಶಗಳನ್ನು ಮಹಿಳೆಯರು ಹೊಂದಿದ್ದಾರೆ. ಎಂಎಸ್‌ಎಂಇ ಸಚಿವಾಲಯವು ಎಂಎಸ್‌ಎಂಇಗಳನ್ನು ಸಕ್ರಿಯವಾಗಿ ಉತ್ತೇಜಿಸುತ್ತಿದೆ, ಹೊಸ ಜೀವನೋಪಾಯಗಳನ್ನು ಸೃಷ್ಟಿಸುತ್ತಿದೆ ಮತ್ತು ದೇಶಾದ್ಯಂತ ವ್ಯಕ್ತಿಗಳನ್ನು ಸಬಲೀಕರಣಗೊಳಿಸುತ್ತಿದೆ.

## ದೇಶದ ಅತಿ ಉದ್ದದ ಸಮುದ್ರ ಸೇತುವೆ ಲೋಕಾರ್ಪಣೆಗೆ ಸಜ್ಜು

ಮಹಾರಾಷ್ಟ್ರದ ಬಹು ನಿರೀಕ್ಷಿತ ಯೋಜನೆ ಮುಂಬೈ ಟ್ರಾನ್ಸ್ ಹಾರ್ಬರ್ ಲಿಂಕ್ ಡಿಸೆಂಬರ್ 25ರಂದು ಉದ್ಘಾಟನೆಗೆ ಸಜ್ಜಾಗಿದೆ. ಇದು ರಾಷ್ಟ್ರದ ಅತಿ ಉದ್ದದ ಸಮುದ್ರ ಸೇತುವೆ ಎಂಬ ಹೆಗ್ಗಳಿಕೆಗೆ

# ಸಾಲುದ್ದದ ಸುದ್ದಿಗಳು



ಪಾತ್ರವಾಗಲಿದ್ದು ಮುಂಬೈನಿಂದ ಮತ್ತು ನವಿ ಮುಂಬೈಗೆ ಕೇವಲ 20 ನಿಮಿಷಗಳಲ್ಲಿ ಸಂಪರ್ಕ ಕಲ್ಪಿಸುತ್ತದೆ. ಬೆಂಗಳೂರು ಕಡೆಗೆ ಪ್ರಯಾಣಿಸುವವರಿಗೆ ಈ ಮಾರ್ಗ ಸಂಚಾರದ ಸಮಯ ಕಡಿಮೆ ಮಾಡುವುದರೊಂದಿಗೆ ಪ್ರಯಾಣ ವೆಚ್ಚದ ಹೊರೆಯನ್ನೂ ಇಳಿಸಲಿದೆ.

## 4 ಟ್ರಿಲಿಯನ್ ಡಾಲರ್ ಮೈಲಿಗಲ್ಲು ದಾಟಿದ ಭಾರತ




ಹಲವಾರು ಕ್ಷೇತ್ರಗಳಲ್ಲಿ ನಿರಂತರ ಪ್ರಯತ್ನಗಳಿಂದ ಭಾರತವು ಗಮನಾರ್ಹ ಸಾಧನೆ ಮಾಡಿದ್ದು, ಜಿಡಿಪಿಯಲ್ಲಿ ಐತಿಹಾಸಿಕ ಏರಿಕೆಗೆ ಕಾರಣವಾಗಿದೆ. ಇದರ ಪ್ರತಿಫಲವಾಗಿ ಭಾರತವು ಇದೇ ಮೊದಲ ಬಾರಿಗೆ ಜಿಡಿಪಿಯಲ್ಲಿ 4 ಟ್ರಿಲಿಯನ್ ಡಾಲರ್ ಮಟ್ಟವನ್ನು ದಾಟಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ. 2027ರ ವೇಳೆಗೆ ಭಾರತವು ಜಪಾನ್ ಮತ್ತು ಜರ್ಮನಿಯನ್ನು ಹಿಂದಿಕ್ಕಿ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮುವ ನಿರೀಕ್ಷೆಯಿದೆ

## ಉತ್ತರ ಪ್ರದೇಶದಲ್ಲಿ ಹಲಾಲ್ ನಿಷೇಧ

ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರ ಪ್ರದೇಶ ಸರ್ಕಾರವು ನ. 18ರಂದು ರಾಜ್ಯದಲ್ಲಿ ಎಲ್ಲಾ ಹಲಾಲ್ -ಪ್ರಮಾಣೀಕೃತ ವಸ್ತುಗಳ



ಮೇಲೆ ನಿಷೇಧ ವಿಧಿಸಿದೆ. ಹಲಾಲ್ ಪ್ರಮಾಣೀಕರಣದ ಆಹಾರ, ಔಷಧಗಳು ಮತ್ತು ಸೌಂದರ್ಯವರ್ಧಕ ವಸ್ತುಗಳ ಉತ್ಪಾದನೆ, ಸಂಗ್ರಹಣೆ, ವಿತರಣೆ ಮತ್ತು ಮಾರಾಟವನ್ನು ತಕ್ಷಣವೇ ಜಾರಿಗೆ ಬರುವಂತೆ ನಿಷೇಧಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಮತ್ತು ಹಲಾಲ್ ಪ್ರಮಾಣೀಕರ ಪತ್ರದ ಕುರಿತು ಇರುವ ಗೊಂದಲ ತಡೆಗಟ್ಟಲು ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರ ಹೇಳಿದೆ.

## ಟಿಬಿ ವಿರುದ್ಧದ ಹೋರಾಟದಲ್ಲಿ ಭಾರತದ ಯಶಸ್ಸನ್ನು ಕೊಂಡಾಡಿದ ವಿಶ್ವ ಆರೋಗ್ಯ ಸಂಸ್ಥೆ



2015 ರಿಂದ 2022ರವರೆಗೆ 16 ಪ್ರತಿಶತದಷ್ಟು ಟಿಬಿ ಸಂಭವವನ್ನು ಮತ್ತು 18 ಪ್ರತಿಶತದಷ್ಟು ಟಿಬಿ ಮರಣ ಪ್ರಮಾಣವನ್ನು ಕಡಿಮೆ ಮಾಡುವಲ್ಲಿ ಭಾರತದ ಯಶಸ್ಸನ್ನು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಪ್ರಶಂಸಿಸಿದೆ. ತನ್ನ ಜಾಗತಿಕ ಟಿಬಿ ವರದಿ 2023 ಅನ್ನು ಡಬ್ಲ್ಯುಎಚ್‌ಒ ಬಿಡುಗಡೆ ಮಾಡಿದ್ದು, ಟಿಬಿ ಮರಣ ಪ್ರಮಾಣವನ್ನು 2021 ರಲ್ಲಿ 4.94 ಲಕ್ಷದಿಂದ 2022 ರಲ್ಲಿ 3.31 ಲಕ್ಷಕ್ಕೆ 34 ಪ್ರತಿಶತದಷ್ಟು ಭಾರತ ಕಡಿಮೆಗೊಳಿಸಿದೆ. ಪ್ರಧಾನಮಂತ್ರಿ ಟಿಬಿ ಮುಕ್ತ ಭಾರತ್ ಅಭಿಯಾನವು ದೇಶದಾದ್ಯಂತ ಅದ್ಭುತವಾದ ಪ್ರತಿಕ್ರಿಯೆಯನ್ನು ಪಡೆದಿದೆ ಮತ್ತು 11 ಲಕ್ಷಕ್ಕೂ ಹೆಚ್ಚು ಟಿಬಿ ರೋಗಿಗಳನ್ನು ದತ್ತು ತೆಗೆದುಕೊಳ್ಳಲು ಎಲ್ಲಾ ವರ್ಗಗಳ 1 ಲಕ್ಷ ನಿ-ಕ್ಷಯ ಮಿತ್ರರು ಮುಂದೆ ಬರುತ್ತಿದ್ದಾರೆ. ನಿ-ಕ್ಷಯ್ ಪೋಷಣ್ ಯೋಜನೆ 2018 ರಲ್ಲಿ ಪ್ರಾರಂಭವಾದಾಗಿನಿಂದ ಸುಮಾರು 2,613 ಕೋಟಿ ರೂಪಾಯಿಗಳನ್ನು 95 ಲಕ್ಷ ಟಿಬಿ ರೋಗಿಗಳಿಗೆ ವಿತರಿಸಲಾಗಿದೆ.

# ಭಾರತದಲ್ಲಿ ಮೊದಲ ಯಕೃತ್ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ 20 ತಿಂಗಳ ಬಾಲಕ ಈಗ ವೈದ್ಯ

ಪ್ರೇರಣಾ

20 ತಿಂಗಳ ಬಾಲಕನಾಗಿದ್ದಾಗ ಸಂಜಯ್ ಶಕ್ತಿ ಭಾರತದ ಮೊದಲ ಯಕೃತ್ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಈಗ ಅವರೇ ಸ್ವತಃ ವೈದ್ಯರಾಗಿದ್ದಾರೆ. ಈ ಶಸ್ತ್ರ ಚಿಕಿತ್ಸೆಯಾದ 25 ವರ್ಷಗಳ ಸಂದರ್ಭದಲ್ಲಿ ಡಾ. ಸಂಜಯ್ ರವನ್ನು ದೆಹಲಿಯಲ್ಲಿ ಸನ್ಮಾನಿಸಲಾಯಿತು. ಸಿಕ್ಕ ಮರುಜೀವದ ಅವಕಾಶವನ್ನು ಸದುಪಯೋಗಿಸಿಕೊಂಡ ಪ್ರೇರಣಾದಾಯಿ ಕತೆ ಇಲ್ಲಿದೆ.



ಡಾ. ಸಂಜಯ್ ಅವರಿಗೆ ಜನನದಿಂದಲೇ ಬೈಲ್ಲೈರಿ ಅಟ್ರೇಶಿಯಾ ಎಂಬ ಸಮಸ್ಯೆ ಇತ್ತು. ಯಕೃತ್‌ನಿಂದ ಪಿತ್ತಕೋಶಕ್ಕೆ ಪಿತ್ತರಸ ಸಾಗಿಸುವ ಮಾರ್ಗದಲ್ಲಿ ಅಡಚಣೆಯಾಗುತ್ತಿತ್ತು. ಈ ಸಮಸ್ಯೆಗೆ ಪರಿಹಾರವಾಗಿ ದೆಹಲಿಯ ಅಪೋಲೋ ಆಸ್ಪತ್ರೆಯಲ್ಲಿ ನವೆಂಬರ್ 1998ರಲ್ಲಿ ಇವರಿಗೆ ಯಕೃತ್ ಕಸಿ ಶಸ್ತ್ರಚಿಕಿತ್ಸೆ ನೀಡಲಾಗಿತ್ತು. ಈ ಶಸ್ತ್ರ ಚಿಕಿತ್ಸೆಗೆ ನೆರವಾಗಿದ್ದು ಅವರ ತಂದೆಯೇ. ಇವರ ತಂದೆಯವರ ಯಕೃತ್‌ನಲ್ಲಿನ ಒಂದು ಚಿಕ್ಕ ಭಾಗವನ್ನು ಕತ್ತರಿಸಿ ಅದನ್ನು ಶಕ್ತಿಯವರ ದೇಹಕ್ಕೆ ಸೇರಿಸಿದ್ದರು. ಸುಮಾರು 2 ತಿಂಗಳು ಆಸ್ಪತ್ರೆಯ ಐಸಿಯುನಲ್ಲೇ ಇವರು ಈ ಚಿಕಿತ್ಸೆ ಪಡೆದುಕೊಂಡಿದ್ದರು. ಭಾರತದಲ್ಲಿ ಆಗ ಮೊಟ್ಟ ಮೊದಲ ಬಾರಿಗೆ ಈ ರೀತಿಯ ಶಸ್ತ್ರಚಿಕಿತ್ಸೆ ನಡೆದಿತ್ತು ಹಾಗೂ ಅದರ ಕಾರಣವಾಗಿ ದೇಶವ್ಯಾಪ್ತಿ ಸುದ್ದಿಯಾಗಿತ್ತು. ಇವರ ಹೆಸರು ಮೊದಲು ಶಕ್ತಿಯೆಂದು ಇದ್ದಿದ್ದು, ಆದರೆ ಈ ಶಸ್ತ್ರ ಚಿಕಿತ್ಸೆಯ ಸಂದರ್ಭದಲ್ಲಿ ಶಕ್ತಿಯವರಿಗೆ ಆಸ್ಪತ್ರೆಯಲ್ಲಿ ಸಂಜಯ್ ಎಂದು ಹೆಸರು ನೀಡಿದ್ದರು. ನಂತರ ಅವರನ್ನು ಸಂಜಯ್ ಶಕ್ತಿ ಎಂದೇ ಗುರುತಿಸಿಕೊಂಡರು.

ಸಂಜಯ್ ಶಕ್ತಿರವರಿಗೆ ಕೆಲವು ವರ್ಷಗಳಾದ ಬಳಿಕ ತಮ್ಮ ಹೊಟ್ಟೆಯ ಮೇಲಿದ್ದ ಗಾಯದ ಗುರುತಿನ ಹಿನ್ನೆಲೆಯು ತಿಳಿಯಬಂತು. ತಮಗೆ ಮರುಜೀವ ಸಿಕ್ಕಿದ್ದು ವೈದ್ಯರಂಗದಿಂದ

> "10 ವೈದ್ಯರು ಮಾಡಿದ ಶಸ್ತ್ರಚಿಕಿತ್ಸೆಯಿಂದ ನಾನು ಮರುಜನ್ಮ ಪಡೆದಿದ್ದೇನೆ. ಅದೇ ಕಾರಣಕ್ಕೆ ನಾನೂ ಇನ್ನೊಬ್ಬರ ಜೀವ ಉಳಿಸುವ ವ್ಯಕ್ತಿಯಾಗಬೇಕೆಂದು ವೈದ್ಯನಾಗುವ ಕನಸು ಕಂಡಿದ್ದೆ. ಅದು ಈಗ ನನಸಾಗಿದೆ"
>
> – ಡಾ. ಸಂಜಯ್ ಶಕ್ತಿ



ಎಂದು ಅರಿತುಕೊಂಡು ಶಕ್ತಿರವರು ತಾನು ವೈದ್ಯನಾಗಬೇಕು ಎಂಬ ದೃಢ ಸಂಕಲ್ಪವನ್ನು ಮಾಡಿದ್ದರು. 2021ರಲ್ಲಿ ಸಂಜಯ್ ಶಕ್ತಿ ತಮ್ಮ ಸಂಕಲ್ಪವನ್ನು ಪೂರ್ಣಗೊಳಿಸಿ ವೈದ್ಯಕೀಯ ಶಿಕ್ಷಣವನ್ನು ಮುಗಿಸಿ ಬೆಂಗಳೂರಿನಲ್ಲಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿ ಈಗ ತಮಿಳುನಾಡಿನ ಕಾಂಚೀಪುರಂನಲ್ಲಿ ಮಕ್ಕಳ ತಜ್ಞರಾಗಿ ವೈದ್ಯಕೀಯ ರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ವೈದ್ಯಕೀಯ ಲೋಕದಿಂದ ಪುನರ್‌ಜನ್ಮ ಪಡೆದು ಈಗ ಅದೇ ರಂಗದಲ್ಲಿ ಸೇವೆ ಸಲ್ಲಿಸುವಂತೆ ಬೆಳೆದಿರುವುದು ಪ್ರೇರಣಾದಾಯಕವಾಗಿದೆ. ಜೀವನದಲ್ಲಿ ಯಾವುದೇ ಕಷ್ಟ ಬಂದರೂ ಬದುಕುವ ಛಲದ ಮೂಲಕ ನಾವು ಹೇಗೆ ಮುಂದಿನ ಜೀವನವನ್ನು ರೂಪಿಸಿಕೊಳ್ಳಬೇಕು ಎಂಬುದಕ್ಕೆ ಸಂಜಯ್ ಶಕ್ತಿ ಬಹಳ ಶ್ರೇಷ್ಠ ಉದಾಹರಣೆಯಾಗಿದ್ದಾರೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th NOVEMBER 2023

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-12-2023



## 22.23 ಲಕ್ಷ ದೀಪಗಳನ್ನು ಬೆಳಗಿ ವಿಶ್ವ ದಾಖಲೆ ಬರೆದ ಆಯೋಧ್ಯೆ ದೀಪೋತ್ಸವ

ರಾಮ ಜನ್ಮಭೂಮಿ ಅಯೋಧ್ಯೆಯು ದೀಪಾವಳಿಯಂದು ದೀಪಗಳಿಂದ ಮಿಂದೆದ್ದಿತು. ಈ ಮೂಲಕ ಭವ್ಯವಾದ ದೀಪೋತ್ಸವ ಆಚರಣೆಗೂ ಸಾಕ್ಷಿಯಾಯಿತು. ಇಲ್ಲಿನ ಘಾಟ್ಗಳಲ್ಲಿ ಲಕ್ಷಗಟ್ಟಲೆ ಮಣ್ಣಿನ ದೀಪ ಬೆಳಗಿಸುವ ಮೂಲಕ ಸರಯೂ ನದಿಯ ದಂಡೆಯ ಮೇಲಿರುವ ದೇವಾಲಯ ನಗರವು ತನ್ನದೇ ಆದ ವಿಶ್ವ ದಾಖಲೆಗೆ ಸಾಕ್ಷಿಯಾಯಿತು. ರಾಮ್ ಕಿ ಪೈಡಿ ಸೇರಿ ಅಯೋಧ್ಯೆಯ 51 ಘಾಟ್‌ಗಳಲ್ಲಿ 22,23,000 ದೀಪಗಳನ್ನು ಬೆಳಗಿಸುವ ಮೂಲಕ ಉತ್ತರಪ್ರದೇಶ ಸರ್ಕಾರ 6ನೇ ಗಿನ್ನೆಸ್ ವಿಶ್ವದಾಖಲೆ ಬರೆದಿದೆ. 2022ರಲ್ಲಿ ದೀಪೋತ್ಸವ ಆಚರಣೆಯ ಸಮಯದಲ್ಲಿ ಸರ್ಕಾರವು 16 ಲಕ್ಷ ದೀಪಗಳನ್ನು ಬೆಳಗಿಸಿ ಗಿನ್ನೆಸ್ ದಾಖಲೆ ಸೃಷ್ಟಿಸಿತ್ತು. ದೀಪೋತ್ಸವ ಮೆರವಣಿಗೆಯು ಭಗವಾನ್ ರಾಮನ ಸಾರವನ್ನು ಚಿತ್ರಿಸುವ 18 ವಿಸ್ಮಯ-ಸ್ಫೂರ್ತಿದಾಯಕ ಮತ್ತು ದೈವಿಕ ಸ್ತಬ್ಧಚಿತ್ರಗಳನ್ನು ಪ್ರದರ್ಶಿಸಿತು.



## ರಾಮಭಕ್ತಿ, ದೇಶಭಕ್ತಿ ಬೇರೆಯಲ್ಲ: ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ



ಅಯೋಧ್ಯೆಯ ರಾಮಮಂದಿರದಲ್ಲಿ ಮಕರಸಂಕ್ರಾಂತಿ ಮುಗಿಯುತ್ತಿದ್ದಂತೆ ಉತ್ತರಾಯಣದ ಪರ್ವಕಾಲದಲ್ಲಿ ಶ್ರೀರಾಮದೇವರ ಪ್ರಾಣ ಪ್ರತಿಷ್ಠೆ ನಡೆಯಲಿದೆ ಎಂದು ಪೇಜಾವರ ಮಠಾಧೀಶ ವಿಶ್ವಪ್ರಸನ್ನ ಸ್ವಾಮೀಜಿ ತಿಳಿಸಿದರು. ಮಂದಿರ ನಿರ್ಮಾಣ ಸಮಿತಿಯ ಟ್ರಸ್ಟಿಗಳಾಗಿರುವ ಸ್ವಾಮೀಜಿ, ಜನವರಿ 22ರ ಅಭಿಜಿನ್ ಮುಹೂರ್ತದಲ್ಲಿ ಶ್ರೀರಾಮದೇವರ ಪ್ರಾಣ ಪ್ರತಿಷ್ಠೆ ನಡೆಯಲಿದೆ. ಪ್ರಧಾನಿ ಮೋದಿ ಮಂದಿರದ ಉದ್ಘಾಟನೆ ಮಾಡಲಿದ್ದಾರೆ ಎಂದರು. ರಾಮದೇವರ ಪ್ರತಿಷ್ಠಾಪನೆಯ ದಿನ ಎಲ್ಲರಿಗೂ ಅವಕಾಶ ಇರುವುದಿಲ್ಲ. ಹಾಗಾಗಿ ತಮ್ಮದೇ ಊರಿನ ದೇವಮಂದಿರಗಳಲ್ಲಿ ಅಳವಡಿಸಿರುವ ಬೃಹತ್ ಪರದೆಯಲ್ಲಿ ದೃಶ್ಯ ವೀಕ್ಷಣೆ ಮಾಡಬೇಕು. ಬಳಿಕ ಪೂಜೆ, ಭಜನೆ ಪ್ರಸಾದ ವಿತರಣೆ ಮಾಡಬೇಕು. ರಾತ್ರಿ ಹೊತ್ತು 5 ಶತಮಾನಗಳ ದ್ಯೋತಕವಾಗಿ ಐದು ದೀಪಗಳನ್ನು ಬೆಳಗಬೇಕು. ಜನವರಿ 23ರಿಂದ ಮಾರ್ಚ್ 10ರವರೆಗೆ 48 ದಿನಗಳ ಕಾಲ ರಾಮಮಂದಿರದಲ್ಲಿ ಮಂಡಲ ಉತ್ಸವ ನಡೆಯುತ್ತದೆ ಎಂದು ತಿಳಿಸಿದರು. ರಾಮಮಂದಿರದಲ್ಲಿ ಯಾವುದೇ ಸೇವಾ ರೂಪದ ಪಟ್ಟಿ ಇರುವುದಿಲ್ಲ. ನಾವು ರಾಮಮಂದಿರ ಮಾತ್ರವಲ್ಲ, ರಾಮರಾಜ್ಯದ ಕನಸು ಕಂಡವರು. ಆದ್ದರಿಂದ ರಾಮಭಕ್ತಿ ಬೇರೆಯಲ್ಲ, ದೇಶ ಭಕ್ತಿ ಬೇರೆಯಲ್ಲ. ರಾಮ ಸೇವೆ ಮಾಡುವ ಇಚ್ಛೆಯುಳ್ಳವರು, ಅಶಕ್ತರಿಗೆ ಸಹಾಯ ಮಾಡುವ ಮೂಲಕ, ತಾವು ಮಾಡುವ ಕೆಲಸದಲ್ಲಿಯೇ ಸೇವೆ ಮಾಡುವ ಮೂಲಕ ದೇಶಸೇವೆ ಮಾಡಬಹುದು. ಇದನ್ನೇ ರಾಮದೇವರ ಸೇವೆ ಎಂದು ಮಾಡಿ ಎಂದರು.

## ಅಮೇರಿಕಾ ಟೆಂಪಿ ಅರಿಜೋನಾದಲ್ಲಿ ಕನ್ನಡಿಗ ವಿಠಲ ರಾಮಮೂರ್ತಿ ದಿನ



ಮಂಗಳೂರು: ಅಮೇರಿಕಾದ ಟೆಂಪಿ ಅರಿಜೋನಾ ನಗರದಲ್ಲಿ ನ.5ನ್ನು 'ವಿಠಲ ರಾಮಮೂರ್ತಿ ದಿನ' ಎಂದು ಘೋಷಿಸಲಾಗಿದೆ. ಹೆಮ್ಮೆಯ ಕನ್ನಡಿಗರಾದ ಮೂಲತಃ ಧರ್ಮಸ್ಥಳದ ವಿಠಲ ರಾಮಮೂರ್ತಿಯವರು ಚೆನ್ನೈಯಲ್ಲಿ ನೆಲೆಸಿದ್ದು, ಆಕಾಶವಾಣಿಯ ಉನ್ನತ ಶ್ರೇಣಿಯ ಕಲಾವಿದರಾಗಿದ್ದಾರೆ. ಅಂತಾರಾಷ್ಟ್ರೀಯ ಪ್ರಖ್ಯಾತಿ ಪಡೆದ ಕಲಾವಿದರಾದ ಇವರು, ವಯಲಿನ್ ಮಾಂತ್ರಿಕ ವಿದ್ವಾನ್ ಲಾಲ್ಗುಡಿ ಜಯರಾಮನ್ ಅವರ ಪಟ್ಟ ಶಿಷ್ಯ. ಸುಮಾರು 6000ಕ್ಕೂ ಮಿಕ್ಕಿ ಕಛೇರಿಗಳನ್ನು ಭಾರತ ಹಾಗೂ ಇತರೆ ರಾಷ್ಟ್ರಗಳಲ್ಲಿ ನೀಡಿದ ಸಾಧನೆ ಇವರದ್ದು. ಅವರ ಮೂಲ ಮನೆಯಾದ ಧರ್ಮಸ್ಥಳದ ಸಮೀಪದ ನಿಡ್ಲೆ ಎಂಬ ಪುಟ್ಟ ಹಳ್ಳಿಯಲ್ಲಿ ವರ್ಷಂಪ್ರತಿ 'ಕರುಂಬಿತ್ತಿಲ್ ಶಿಬಿರ' ಎನ್ನುವ ಸಂಗೀತ ಶಿಬಿರವನ್ನು ನಡೆಸಿಕೊಂಡು, ಸಂಗೀತ ಕ್ಷೇತ್ರದ ಅತೀ ದೊಡ್ಡ ವಿದ್ವಾಂಸರನ್ನು ಈ ಪುಟ್ಟ ಹಳ್ಳಿಗೆ ಕರೆತಂದು, ಇಲ್ಲಿಯ ಕಲಾಸಕ್ತ ವಿದ್ಯಾರ್ಥಿಗಳಿಗೆ ಶುಲ್ಕ ರಹಿತವಾಗಿ ಶಿಬಿರ ಏರ್ಪಡಿಸುತ್ತಾರೆ. ಗುರುಕುಲ ಮಾದರಿಯ ಈ ಶಿಬಿರವು ಇದೀಗ ವಿಶ್ವದಲ್ಲೆಡೆ ಹೆಸರುವಾಸಿಯಾಗಿದ್ದು, ಪ್ರತೀ ವರ್ಷ 250ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಭಾರತ, ಅಮೆರಿಕ ಸೇರಿದಂತೆ ಹತ್ತಾರು ದೇಶಗಳಿಂದ ಬಂದು ಇಲ್ಲಿ ಸಂಗೀತ ಕಲಿಯುತ್ತಾರೆ.

## ಹಿಂದು ಧರ್ಮದಿಂದಲೇ ಪ್ರೇರಣೆ: ವಿವೇಕ್ ರಾಮಸ್ವಾಮಿ



ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸಲು ಹಿಂದು ಧರ್ಮವೇ ನನಗೆ ಪ್ರೇರಣೆ ನೀಡಿದ್ದು, ಅದರಿಂದಲೇ ಇಂದು ಚುನಾವಣೆಯಲ್ಲಿದ್ದೇನೆ. ಹಿಂದು ಧರ್ಮವು ನನಗೆ ನೈತಿಕ ಜವಾಬ್ದಾರಿಯನ್ನು ಅರ್ಥಮಾಡಿಕೊಳ್ಳುವ ಸ್ವಾತಂತ್ರ್ಯ ನೀಡಿದೆ ಎಂದು ಅಮೆರಿಕದ ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಚುನಾವಣಾ ಅಭ್ಯರ್ಥಿ ವಿವೇಕ್ ರಾಮಸ್ವಾಮಿ ಹೇಳಿದ್ದಾರೆ. 'ದಿ ಫ್ಯಾಮಿಲಿ ಲೀಡರ್ ಫೋರಮ್' ಟಾಕ್ ಶೋನಲ್ಲಿ ಭಾಗವಹಿಸಿದ್ದ ವಿವೇಕ್ ರಾಮಸ್ವಾಮಿ ಅವರಿಗೆ ಹಲವಾರು ಪ್ರಶ್ನೆಗಳನ್ನು ಕೇಳಲಾಯಿತು. ಧರ್ಮಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, "ನಾನು ಹಿಂದು. ನಿಜವಾದ ದೇವರನ್ನು ನಂಬುತ್ತೇನೆ. ದೇವರು ನಮ್ಮೆಲ್ಲರನ್ನೂ ಇಲ್ಲಿಗೆ ವಿಶೇಷ ಉದ್ದೇಶಕ್ಕಾಗಿ ಕಳುಹಿಸಿದ್ದಾನೆ. ಆ ಉದ್ದೇಶ ಸಾಕಾರಗೊಳಿಸುವುದು ನಮ್ಮ ನೈತಿಕ ಕರ್ತವ್ಯ. ನಾವೆಲ್ಲರೂ ಸಮಾನರು. ಏಕೆಂದರೆ ದೇವರು ನಮ್ಮೆಲ್ಲರಲ್ಲೂ ನೆಲೆಸಿದ್ದಾನೆ. ಇದು ನಮ್ಮ ಧರ್ಮದ ಮೂಲವಾಗಿದೆ" ಎಂದು ಹೇಳಿದ್ದಾರೆ. ಪ್ರಪಂಚದಾದ್ಯಂತ ವಿವಾಹ, ವಿಚ್ಛೇದನ ಮತ್ತು ಮುರಿದು ಬೀಳುವ ಸಂಪ್ರದಾಯದ ಬಗ್ಗೆ ಮಾತನಾಡುವಾಗ, ನಾನು ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿ ಬೆಳೆದವನು. ಕುಟುಂಬವೇ ನಮ್ಮ ಅಡಿಪಾಯ ಎಂದು ಪಾಲಕರು ನನಗೆ ಕಲಿಸಿದ್ದಾರೆ. ಪಾಲಕರನ್ನು ಗೌರವಿಸಬೇಕು, ವಿವಾಹವು ಪವಿತ್ರ ಸಂಬಂಧವಾಗಿದೆ. ಮದುವೆಗೆ ಮೊದಲು ಸಂಯಮ ಅಗತ್ಯ. ಕುಟುಂಬದ ಯೋಗಕ್ಷೇಮಕ್ಕಾಗಿ ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ.

## ಭಾರತದಲ್ಲಿ ಪ್ರಜಾಪ್ರಭುತ್ವವು ಹಿಂದೂಗಳಿಂದಾಗಿ ಅಸ್ತಿತ್ವದಲ್ಲಿದೆ: ಜಾವೇದ್ ಅಖ್ತರ್



ಹಿಂದೂಗಳು ಸದಾ ಸಹಿಷ್ಣುಗಳು ಮತ್ತು ಭಾರತದಲ್ಲಿ ಪ್ರಜಾಪ್ರಭುತ್ವವು ಹಿಂದೂಗಳಿಂದ ಅಸ್ತಿತ್ವದಲ್ಲಿದೆ ಎಂದು ಖ್ಯಾತ ಸಾಹಿತಿ ಜಾವೇದ್ ಅಖ್ತರ್ ಅವರು ಹೇಳಿದ್ದಾರೆ. ಮುಂಬೈನಲ್ಲಿ ರಾಜ್ ಠಾಕ್ರೆ ಅವರ ಮಹಾರಾಷ್ಟ್ರ ನವನಿರ್ಮಾಣ ಸೇನೆ (ಎಂಎನ್‌ಎಸ್) ಆಯೋಜಿಸಿದ್ದ ದೀಪೋತ್ಸವ ಕಾರ್ಯಕ್ರಮದಲ್ಲಿ ಅಖ್ತರ್ ಈ ಹೇಳಿಕೆ ನೀಡಿದ್ದಾರೆ. "ಕೆಲವರು ಯಾವಾಗಲೂ ಅಸಹಿಷ್ಣುತೆ ಹೊಂದಿರುತ್ತಾರೆ. ಹಿಂದೂಗಳು ಹಾಗಲ್ಲ. ಅವರು ಉದಾರ ಮತ್ತು ವಿಶಾಲ ಹೃದಯದ ಶ್ರೇಷ್ಠ ಗುಣವನ್ನು ಹೊಂದಿದ್ದಾರೆ. ಅದನ್ನು ಕಳೆದುಕೊಳ್ಳಬೇಡಿ, ಇಲ್ಲದಿದ್ದರೆ ನೀವು ಇತರರಂತೆ ಆಗುತ್ತೀರಿ" ಎಂದು ಅಖ್ತರ್ ಹಿಂದೂಗಳಿಗೆ ಹೇಳಿದ್ದಾರೆ.

"ಭಾರತದಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿದೆ. ಏಕೆಂದರೆ ಹಿಂದೂ ಸಂಸ್ಕೃತಿ ಮತ್ತು ಸಂಪ್ರದಾಯದ ಕಾರಣದಿಂದಾಗಿ. ಮೂರ್ತಿ ಪೂಜೆ ಮಾಡಿದರೂ ಹಿಂದೂ, ಮಾಡದಿದ್ದರೂ ಹಿಂದೂವೇ ಆಗಿರುತ್ತೀರಿ" ಎಂದಿದ್ದಾರೆ. ಸ್ವಯಂ ಘೋಷಿತ ನಾಸ್ತಿಕರಾದ ಅಖ್ತರ್, ರಾಮ ಮತ್ತು ಸೀತೆಯ ಭೂಮಿಯಲ್ಲಿ ಜನಿಸಿದ್ದಕ್ಕೆ ನನಗೆ ಸಂತೋಷವಾಗಿದೆ ಎಂದು ಹೇಳಿದ್ದಾರೆ. ವಿಶಾಲ ಮನಸ್ಸಿನ ದೃಷ್ಟಿಕೋನವನ್ನು ಕಾಪಾಡಿಕೊಳ್ಳಲು ಪ್ರೇಕ್ಷಕರನ್ನು ಪ್ರೋತ್ಸಾಹಿಸಿದ ಅವರು, "ರಾಮಾಯಣ ನಮ್ಮ ಸಾಂಸ್ಕೃತಿಕ ಪರಂಪರೆಯಾಗಿದೆ" ಎಂದು ಹೇಳಿದರು. ನಾನು ನಾಸ್ತಿಕನಾಗಿದ್ದರೂ ಮರ್ಯಾದಾ ಪುರುಷೋತ್ತಮ ರಾಮನನ್ನು ತುಂಬಾ ಗೌರವಿಸುತ್ತೇನೆ. ಶ್ರೀರಾಮ ನಮ್ಮ ಸಂಸ್ಕೃತಿ ಮತ್ತು ನಾಗರಿಕತೆಯ ಭಾಗವಾಗಿದೆ. ರಾಮಾಯಣ ನಮ್ಮ ಸಂಸ್ಕೃತಿಯ ಪರಂಪರೆಯೂ ಆಗಿದೆ. ಅದಕ್ಕಾಗಿಯೇ ನಾನು ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದೇನೆ. ನಾವು ಮಾತನಾಡುವಾಗಲೆಲ್ಲಾ ಮರ್ಯಾದಾ ಪುರುಷೋತ್ತಮ ಭಗವಾನ್ ಶ್ರೀರಾಮ ಮತ್ತು ಸೀತೆ ಮಾತ್ರ ನೆನಪಿಗೆ ಬರುತ್ತಾರೆ" ಎಂದು ಅವರು ಕಾರ್ಯಕ್ರಮದಲ್ಲಿ ಹೇಳಿದರು.

## 5 ವರ್ಷದಲ್ಲಿ 3 ಸಾವಿರ ರೈಲುಗಳ ಹೆಚ್ಚಳ

ರೈಲು ನಿಲ್ದಾಣಗಳಲ್ಲಿ ಹೆಚ್ಚುತ್ತಿರುವ ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಸುಲಲಿತ ಸಂಚಾರವನ್ನು ಒದಗಿಸುವುದಕ್ಕಾಗಿ ರೈಲ್ವೆ ವ್ಯವಸ್ಥೆಯನ್ನು ವಿಸ್ತರಿಸಲು ಮುಂದಿನ 5 ವರ್ಷಗಳಲ್ಲಿ ರೈಲುಗಳ ಸಂಖ್ಯೆಯನ್ನು 3 ಸಾವಿರದಷ್ಟು ಹೆಚ್ಚಿಸಲಾಗುವುದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಹೀಗಾಗಿ 2027ರ ಹೊತ್ತಿಗೆ ಟಿಕೆಟ್ ಬುಕ್ ಮಾಡಿದ ಎಲ್ಲರಿಗೂ ಕನ್ಫರ್ಮ್ ಟಿಕೆಟ್ ದೊರೆಯುತ್ತದೆ ಎನ್ನಲಾಗಿದೆ.

ಪ್ರಸ್ತುತ ವಾರ್ಷಿಕ 800 ಕೋಟಿ ಪ್ರಯಾಣಿಕರು ರೈಲು ಸೇವೆ ಪಡೆದುಕೊಳ್ಳುತ್ತಿದ್ದಾರೆ. ಜನಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ಸಾಮರ್ಥ್ಯವನ್ನು 1 ಸಾವಿರ ಕೋಟಿಗೆ ಹೆಚ್ಚಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ರೈಲು ಹಾಗೂ ಟ್ರಿಪ್‌ಗಳನ್ನು ಹೆಚ್ಚಳ ಮಾಡಲಾಗುತ್ತದೆ. ಅಲ್ಲದೇ ರೈಲುಗಳ ವೇಗವನ್ನು ಹೆಚ್ಚಿಸಲಾಗುತ್ತದೆ. ದೂರದ ಪ್ರಯಾಣಗಳಲ್ಲಿ ಕನಿಷ್ಠ 20 ನಿಮಿಷ ಉಳಿಸಲು ಯೋಜಿಸಲಾಗಿದೆ.



ರೈಲ್ವೆ ಮೂಲಗಳ ಪ್ರಕಾರ, ಪ್ರತಿ ವರ್ಷ ಭಾರತದಲ್ಲಿ 69 ಸಾವಿರ ಬೋಗಿಗಳನ್ನು ತಯಾರು ಮಾಡಲಾಗುತ್ತಿದೆ. ಹೊಸ ಯೋಜನೆಯ ಪ್ರಕಾರ ವಂದೇಭಾರತ್ ರೈಲುಗಳನ್ನು ಹೊರತುಪಡಿಸಿ 200ರಿಂದ 250 ಹೆಚ್ಚುವರಿ ರೈಲುಗಳನ್ನು ತಯಾರು ಮಾಡಲಾಗುತ್ತದೆ. ಅಲ್ಲದೇ 400ರಿಂದ 450 ವಂದೇಭಾರತ್ ರೈಲುಗಳನ್ನು ತಯಾರು ಮಾಡಲಾಗುತ್ತದೆ.

ಪ್ರಸ್ತುತ ದೇಶದಲ್ಲಿ 10,748 ರೈಲುಗಳು ಪ್ರತಿನಿತ್ಯ ಓಡಾಡುತ್ತಿದ್ದು, ಇದನ್ನು ಪ್ರತಿನಿತ್ಯ 13 ಸಾವಿರಕ್ಕೇರಿಸಲು ರೈಲ್ವೆ ನಿರ್ಧರಿಸಿದೆ. ಇದು ಸಾಕಾರಗೊಂಡ ಬಳಿಕ ಅಂದರೆ 2027ರ ಬಳಿಕ ಎಲ್ಲರಿಗೂ ಕನ್ಫರ್ಮ್ ಟಿಕೆಟ್ ದೊರೆಯುವಂತಾಗುತ್ತದೆ. ಅಲ್ಲದೇ ಪ್ರತಿ ವರ್ಷ 5 ಸಾವಿರ ಕಿ.ಮೀ. ಹಳಿ ನಿರ್ಮಾಣ ಮಾಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.